ಸಾರಸ ಪಕ್ಷಿಯ ಕಥೆ

ಬಂಗಾಳಿ ಮೂಲ : ರಾಜಕೃಷ್ಣ ಭಟ್ಟಾಚಾರ್ಯ | ಚಿತ್ರ : ಜುಂಕೋ ಭಟ್ಟಾಚಾರ್ಯ | ಕನ್ನಡಾನುವಾದ : ಗಿರಿಜಾದೇವಿ

ಅನೇಕ ವರ್ಷಗಳ ಹಿಂದೆ ಹಿಮವೃಷ್ಟಿಯಾಗುತ್ತಿದ್ದ ಒಂದು ದಿನ ಬೆಳಗ್ಗೆ, ಮುದುಕ ನೊಬ್ಬ ತನ್ನ ಕೆಲಸಕ್ಕಾಗಿ ಹೊರಟಿದ್ದ. ರಸ್ತೆಯಲ್ಲಿ ಒಂದು ಕಡೆ, ಬಲೆಯಲ್ಲಿ ಸಿಕ್ಕಿ ಬಿದ್ದಿದ್ದ ಒಂದು ಸಾರಸ ಪಕ್ಷಿಯನ್ನು ನೋಡಿದ. ಯಾರೋ ದುಷ್ಟ ಬಲೆ ಹರಡಿ ಹೋಗಿದ್ದ. ಈ ಪಕ್ಷಿ ಅದರಲ್ಲಿ ಸಿಕ್ಕಿ ಹಾಕಿಕೊಂಡಿತ್ತು, ಮುದುಕ ಸಾವಧಾನವಾಗಿ ಪಕ್ಷಿಯನ್ನು ಬಲೆಯಿಂದ ಬಿಡಿಸಿದ. ಪಕ್ಷಿ ಕೂಡಲೇ ಆನಂದದಿಂದ ಹಾರಿಹೋಯಿತು. ಮುದುಕ ಮನೆಗೆ ಹಿಂದಿರು ಗಿದ ನಂತರ ಮುದುಕಿಗೆ ಈ ವಿಷಯವನ್ನು ತಿಳಿಸಿದ. ಅದೇ ದಿನ ರಾತ್ರಿ ಅವರ ಮನೆಯು ಬಾಗಿಲನ್ನು ಯಾರೋ ಖಟ ಖಟ ಬಡಿದು ಶಬ್ದಮಾಡಿದರು. ಯಾರೋ ಬಂದರು ಎನ್ನುತ್ತಾ ಮುದುಕ ಮುದುಕಿ ಇಬ್ಬರೂ ಆತುರಾತುರವಾಗಿ ಬಂದು ಬಾಗಿಲು ತೆರೆದು ನೋಡಿದರು. ಬಾಗಿಲ ಬಳಿ ಸುಂದರಿಯಾದ ಯುವತಿಯೊಬ್ಬಳು ನಿಂತಿದ್ದಳು. ಅವಳು ಹೇಳಿದಳು, ''ನಾನು ಹಿಮವೃಷ್ಟಿಗೆ ಸಿಕ್ಕಿಕೊಂಡೆ. ನಿಮ್ಮೊಂದಿಗೆ ಇರಲು ಆಶಿಸುತ್ತೇನೆ.'' ಮುದುಕ ಮುದುಕಿ ಇಬ್ಬರೂ ಸಮ್ಮತಿಸಿ ಅವಳಿಗೆ ತಮ್ಮ ಮನೆಯಲ್ಲಿ ಇರಲು ಅನುಮತಿ ನೀಡಿದರು. ಮರುದಿನ ಬೆಳಿಗ್ಗೆ ಮುದುಕಿ ಎದ್ದು ನೋಡುತ್ತಾಳೆ, ಆ ಯುವತಿ ಆಗಲೇ ಮನೆಯ ಎಲ್ಲಾ ಕೆಲಸಕಾರ್ಯಗಳನ್ನೂ ಪ್ರಾರಂಭಿಸಿಬಿಟ್ಟಿದ್ದಾಳೆ! ಈ ಮುದಿ ದಂಪತಿಗೆ ಯಾರೂ ಇರಲಿಲ್ಲ , ಇವಳು ಬಂದದ್ದು ಅವರಿಗೆ ಬಹಳ ಸಂತೋಷವನ್ನುಂಟುಮಾಡಿತ್ತು. ದಿನಪೂರ್ತಿ ಬಹಳ ಆನಂದದಲ್ಲಿ ಕಳೆದುಹೋಯಿತು. ಯುವತಿ ಬಹಳ ಖುಷಿಯಿಂದ ಮತ್ತು ಉತ್ಸಾಹದಿಂದ ಮನೆಯ ಎಲ್ಲಾ ಕೆಲಸಗಳನ್ನೂ ಮಾಡಿಕೊಟ್ಟಳು. ರಾತ್ರಿ ಮಲಗುವುದಕ್ಕೆ ಮೊದಲು ಹೇಳಿದಳು, ''ನಾನು ನಿಮಗಾಗಿ ತುಂಬಾ ಸುಂದರವಾದ ಬಟ್ಟೆ ತಯಾರಿಸಿ ಕೊಡುತ್ತೇನೆ. ಆದರೆ, ನಾನು ನನ್ನ ಕೋಣೆಯಲ್ಲಿ ಬಟ್ಟೆಯನ್ನು ತಯಾರು ಮಾಡುವಾಗ ನೀವು ಯಾರೂ ಬಂದು ನೋಡಬಾರದು.'' ಮರುದಿನ ಬೆಳಗ್ಗೆ ಅತ್ಯಂತ ಸುಂದರವಾದ ಒಂದು ಬಟ್ಟೆಯನ್ನು ಅವರಿಗೆ ಬಹುಮಾನವಾಗಿ ಕೊಟ್ಟಳು. ಆ ಬಟ್ಟೆ ನೋಡಿ ಮುದುಕಿ ಕಣ್ಣರಳಿಸಿದಳು. ಮುದುಕನಿಗೆ ಆಶ್ಚರ್ಯವೋ ಆಶ್ಚರ್ಯ. ಅತ್ಯಂತ ನವಿರಾದ ಆ ವಸ್ತ್ರ ಅಸಾಧಾ ರಣವಾಗಿತ್ತು. ಮುದುಕಿ ಅದನ್ನು ಬಹು ಎಚ್ಚರಿಕೆಯಿಂದ ಜೋಪಾನಮಾಡಿ ಬಜಾರಿನಲ್ಲಿ ಮಾರಿಕೊಂಡು ಬರಲು ಹೊರಟಳು. ಬಜಾರಿ ನಲ್ಲಿ ಈ ವಸ್ತ್ರವನ್ನು ಕಂಡ ರಾಜ ಮೋಹಿತನಾಗಿ ಹೋದ! ಬಟ್ಟೆಯ ಗುಣಮಟ್ಟವನ್ನು ಬಹಳವಾಗಿ ಪ್ರಶಂಸಿಸುತ್ತಾ, ಅಧಿಕ ಬೆಲೆ ಕೊಟ್ಟು ಖರೀದಿಸಿದ. ಮುದುಕಿ ಮನೆಗೆ ಬಂದು ಈ ವಿಷಯ ತಿಳಿಸಿದಳು. ಆಗ ಯುವತಿ ಇನ್ನೂ ಸುಂದರವಾದ ವಸ್ತ್ರವನ್ನು ಮರುದಿನ ತಯಾರಿಸಿ ಕೊಡುವುದಾಗಿ ಹೇಳಿದಳು. ಇದೇ ರೀತಿಯಲ್ಲಿ ಪ್ರತಿದಿನವೂ ಒಂದೊಂದು ವಸ್ತ್ರ ತಯಾರಿಸಿ ಕೊಡತೊಡಗಿದಳು. ಮುದುಕಿ ಬಜಾರಿನಲ್ಲಿ ಮಾರಿ ಒಳ್ಳೆಯ ಲಾಭ ಗಳಿಸತೊಡಗಿದಳು. ಆದರೆ ಯುವತಿ ದಿನೇದಿನೇ ಕ್ಷೀಣಿಸುತ್ತಾ ಸಣ್ಣಗಾಗುತ್ತಿದ್ದುದನ್ನು ಮುದುಕಿ ಗಮನಿಸಿದಳು. ಮುದುಕ ಮುದುಕಿಯನ್ನು ವಿಚಾರಿಸಿದ, ''ನಾವು ಈ ಯುವತಿಯನ್ನು ಸರಿಯಾಗಿ ನೋಡಿಕೊಳ್ಳುತ್ತಿದ್ದೇವೆ ತಾನೆ?''

ಹೀಗೆ ದಿನೇದಿನೇ ಸವೆದು ಹೋಗುತ್ತಿದ್ದ ಯುವತಿಯನ್ನು ಕಂಡು ಮುದುಕಿ ದುಃಖಿತಳಾದಳು. ಇದಕ್ಕೆ ಕಾರಣವೇನೋ ಅವಳಿಗೆ ತಿಳಿಯಲಿಲ್ಲ. ಆದ್ದರಿಂದ ಮುದುಕಿ ಕುತೂಹಲ ತಾಳಲಾರದೆ, ಒಂದು ದಿನ ರಾತ್ರಿ ಯುವತಿ ಏನು ಮಾಡುತ್ತಿದ್ದಾಳೆಂದು ನೋಡಲು ಅವಳ ಕೋಣೆಯ ಬಾಗಿಲನ್ನು ಸ್ವಲ್ಪವೇ ತೆರೆದಳು. ಅಲ್ಲಿ ಒಂದು ಸಾರಸ ಪಕ್ಷಿ ತನ್ನ ಪುಕ್ಕಗಳನ್ನು ತನ್ನ ಕೊಕ್ಕಿನಿಂದಲೇ ಕಿತ್ತು ತೆಗೆದು ಮೃದುವಾದ ವಸ್ತ್ರ ತಯಾರಿಸುತ್ತಿತ್ತು. ಆದರೆ, ಸಾರಸ ಪಕ್ಷಿ ಮುದುಕಿಯನ್ನು ನೋಡಿಬಿಟ್ಟಿತು. ಅದು ಮುದುಕಿಗೆ ಹೇಳಿತು, ''ನಿನ್ನ ಗಂಡ ರಕ್ಷಿಸಿದ ಸಾರಸಪಕ್ಷಿ ನಾನೇ. ಅದಕ್ಕಾಗಿಯೆ ನಾನು ಉಪಕಾರ ಸ್ಮರಣೆಯಿಂದ ಈ ರೀತಿ ಉಡುಗೊರೆ ಕೊಡುತ್ತಿದ್ದೇನೆ. ಆದರೆ ನೀನು ನನ್ನ ನಿಬಂಧನೆಯನ್ನು ಮೀರಿದೆ. ಆದುದರಿಂದ ನಾನು ಈಗ ಹಾರಿ ಹೋಗುತ್ತೇನೆ.'' ಹೀಗೆ ಹೇಳಿ ಸಾರಸಪಕ್ಷಿ ಆಕಾಶಕ್ಕೆ ಹಾರಿತು.

ವಿಭೀಷಣನ ಶರಣಾಗತಿ

ಕಥೆ: ಪುಲವರ್ ಕೀರನ್, ಎ. ಅರ್ಮುಗಂ ಮತ್ತು ಸುಂದರಿ ಸುಂದರಂ ಚಿತ್ರ: ಶಂಕರ್

1

ರಾಮ-ರಾವಣರ ಯದ್ಧ ನಡೆಯುತ್ತಿದ್ದಾಗ ಒಂದು ದಿನ...

2

ವಿಭೀಷಣ, ಯುದ್ಧಭೂಮಿಯಲ್ಲಿ ನನಗೆ ಎದುರಾಗಿ ಒಬ್ಬ ತರುಣ ರಾಕ್ಷಸ ನಿಂತಿದ್ದನ್ನು ನೋಡಿದೆಯಾ? ಅವನು ತುಂಬ ಶೂರನಂತೆ ಕಾಣಿಸುತ್ತಿದ್ದಾನೆ.



ಹೌದು ಮಹಾಪ್ರಭು. ಅವನು ನಿಜವಾಗಿಯೂ ಒಬ್ಬ ವೀರಯೋಧ.

3

ರಾಮ, ನೀನು ನನ್ನನ್ನು ಕೇವಲ ಬಾಲಕನೆಂದು ಲಘುವಾಗಿ ತಿಳಿದು ಯುದ್ಧ ಮಾಡಿದೆ ಎಂದಾದರೆ, ಸೋಲು ನಿನಗೆ ಕಟ್ಟಿಟ್ಟ ಬುತ್ತಿ. ಈಗಲೇ ನಿನಗೆ ಎಚ್ಚರಿಕೆ ಹೇಳುತ್ತಿದ್ದೇನೆ!

ಓ! ನೋಡಲು ಮಾತ್ರ ಇವನು ಬಾಲಕ. ಶೌರ್ಯವೆಂಬುದು ಇವನಲ್ಲಿ ಮನೆ ಮಾಡಿದೆ!



4

ವಿಭೀಷಣ! ನಿಜಕ್ಕೂ ಅವನು ವೀರನೇ ಸರಿ. ನಾನು ಅವನ ಕಡೆಗೆ ಬಾಣಗಳ ಮಳೆಗರೆದಾಗ, ಅವನು ಅವುಗಳನ್ನೆಲ್ಲ ಕತ್ತರಿಸಿ ಹಾಕಿದ!

5

ವಿಭೀಷಣ, ಅವನ ಗುರು ನಿಜಕ್ಕೂ ಧನ್ಯನೇ ಸರಿ. ಅವನು ಯಾರ ಶಿಷ್ಯ ಹೇಳು?

ಓ ದಶರಥ ಪುತ್ರ ರಾಮ! ಅವನು ನಿನ್ನೆಡೆಗೆ ಆಗ್ನ್ಯಸ್ತ್ರವನ್ನು ಎಸೆಯುತ್ತಿದ್ದಾನೆ. ಅದಕ್ಕೆ ಪ್ರತಿಯಾಗಿ ವರುಣಾಸ್ತ್ರವನ್ನು ಎಸೆಯಲು ಹಿಂಜರಿಯಬೇಡ.

6

ವಿಭೀಷಣ, ಚಿಂತಿಸಬೇಡ. ಅವನು ನನ್ನನ್ನು ಸೋಲಿಸಲಾರ.

7

ಎಂಥ ವೇಗ! ಏನು ಧೈರ್ಯ! ಅವನು ಯುದ್ಧದಲ್ಲಿ ನನಗೆ ಸರಿಸಾಟಿಯಾಗಿದ್ದಾನೆ!

ಅವರ ನಡುವೆ ಭಯಾನಕ ಯುದ್ಧ ನಡೆಯಿತು. ಆ ತರುಣ ರಾಕ್ಷಸ ಬಿಟ್ಟ ಎಲ್ಲ ಬಾಣಗಳಿಗೂ ರಾಮನು ತಕ್ಕ ಪ್ರತ್ಯಸ್ತ್ರಗಳನ್ನು ಎಸೆದು ಅವುಗಳನ್ನೆಲ್ಲ ನಾಶಮಾಡಿದ. ಯುದ್ಧ ಕೊನೆಯಾಗುತ್ತ ಬಂತು. ತರುಣ ರಾಕ್ಷಸ ಆಯಾಸದಿಂದ ಕ್ಷೀಣಿಸತೊಡಗಿದ.

8



ರಾಮ ಅವನತ್ತ ಒಂದು ಮಾರಕಾಸ್ತ್ರವನ್ನೆಸೆದು ಆ ತರುಣನ ಸಂಹಾರ ಮಾಡಿದ.

9 ವಿಭೀಷಣ ಮುಖವನ್ನು ಮುಚ್ಚಿಕೊಂಡು, ಕಣ್ಣೀರು ಸುರಿಸುತ್ತಾ ಕಲ್ಲಿನಂತೆ ನಿಂತುಬಿಟ್ಟ. ರಾಕ್ಷಸ ನೆಲದ ಮೇಲೆ ಬಿದ್ದಿದ್ದ. ರಾಮನ ಬಾಣ ಅವನ ಎದೆಗೆ ಚುಚ್ಚಿ, ರಕ್ತದೋಕುಳಿ ಹರಿಯುತ್ತಿತ್ತು. ರಾಮ ಅವನ ಬಳಿಗೆ ಬಂದ.



10 ವಿಭೀಷಣ, ಅಳಬೇಡ. ನಿನ್ನ ದೇಶದ ಒಬ್ಬ ಮಹಾನ್ ವೀರಯೋಧನನ್ನು ನೀನು ಕಳೆದುಕೊಂಡೆ. ಅವನಿಗೆ ತಕ್ಕುದಾದ ರೀತಿಯಲ್ಲಿ ಅಂತಿಮ ಸಂಸ್ಕಾರ ನಡೆಯುವಂತೆ ವ್ಯವಸ್ಥೆ ಮಾಡು. ಅವನು ಯಾರು? ಅವನಿಗೆ ಬಿಲ್ವಿದ್ಯೆ ಕಲಿಸಿದ ಗುರು ಯಾರು?